KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

ಪಾವಟೆನಗರ ಧಾರವಾಡ Pavate Nagar, Dharwad    Website : www.kud.ac.in    Tel Ph No. 0836-2215267

ನಂ:/ಕವಿವಿ/ಪರೀಕ್ಷಾ/ಜಿಎಡಿ/110926/2026/ 834    ದಿನಾಂಕ: 23/09/2026

# ಅಧಿಸೂಚನೆ

**ವಿಷಯ:** ನವೆಂಬರ್ 2026 ರಲ್ಲಿ ಜರುಗುವ ಎಲ್ಲ ಸ್ನಾತಕ ಪದವಿಯ **R-NEP ಅಡಿಯಲ್ಲಿ** ಬರುವ 3 ನೇ ಸೆಮಿಸ್ಟರ್ (ರೆಗ್ಯೂಲರ್/ರಿಪೀಟರ್ಸ) & 5 ನೇ ಸೆಮಿಸ್ಟರ್ (ರೆಗ್ಯೂಲರ್) ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ/ಶುಲ್ಕ ತುಂಬುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 22-09-2026

ಎಲ್ಲ ಸ್ನಾತಕ ಪದವಿಯ **R-NEP ಅಡಿಯಲ್ಲಿ ಬರುವ 3 ನೇ ಸೆಮಿಸ್ಟರ್ (ರೆಗ್ಯೂಲರ್/ರಿಪೀಟರ್ಸ) & 5 ನೇ ಸೆಮಿಸ್ಟರ್ (ರೆಗ್ಯೂಲರ್)** ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆಗಳು ನವೆಂಬರ್ 2026 ರಲ್ಲಿ ಜರುಗುವವು. ಸದರಿ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ಕವಿವಿ ಅಂತರ್ಜಾಲದಲ್ಲಿ ಹಾಗೂ UUCMS ತಂತ್ರಾಂಶದಲ್ಲಿ ನಂತರ ಪ್ರಕಟಿಸಲಾಗುವುದು.

ಕವಿವಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರು ವಿದ್ಯಾರ್ಥಿಗಳಿಂದ UUCMS ತಂತ್ರಾಂಶದ ಮೂಲಕ ಪರೀಕ್ಷಾ ಅರ್ಜಿ/ಶುಲ್ಕಗಳನ್ನು ಭರಿಸುವಾಗ ಈ ಕೆಳಗಿನ ವಿವರವಾದ ಸೂಚನೆಗಳನ್ನು ಹಾಗೂ ಕೊನೆಯ ದಿನಾಂಕಗಳನ್ನು ತಪ್ಪದೆ ಗಮನಿಸಬೇಕು.

1. **ದಿನಾಂಕ:23/09/2026** ರಿಂದ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಭರಿಸಿ ದಂಡವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:03/10/2026**.
2. ವಿದ್ಯಾರ್ಥಿಗಳು ರೂ.220/- ಮೊದಲನೆಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕ ಭರಿಸಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:07/10/2026**
3. ವಿದ್ಯಾರ್ಥಿಗಳು ರೂ.240/- ಎರಡನೆಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕ ಭರಿಸಿ ಅರ್ಜಿಯನ್ನು ಸಲ್ಲಿಸಲು ಕೊನೆಯ **ದಿನಾಂಕ:12/10/2026**.
4. ವಿಶ್ವವಿದ್ಯಾಲಯವು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬರುವ ಯಾವುದೇ ಪರೀಕ್ಷಾ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ/ಪರಿಗಣಿಸಲಾಗುವದಿಲ್ಲ. ಅಲ್ಲದೆ, ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಗಳನ್ನು ವಿದ್ಯಾರ್ಥಿಗಳು ಭರ್ತಿಮಾಡಲು ನೇರವಾಗಿ ಪರೀಕ್ಷಾ ವಿಭಾಗವನ್ನು ಸಂಪರ್ಕಿಸದಿರಲು ವಿದ್ಯಾರ್ಥಿಗಳಿಗೆ ತಿಳಿಸಲು ಎಲ್ಲಾ ಕಾಲೇಜುಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.
5. ಪ್ರಾಚಾರ್ಯರು ತಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು UUCMS ತಂತ್ರಾಂಶದ ಮೂಲಕ ಭರ್ತಿ ಮಾಡಿದ ಪರೀಕ್ಷಾ ಅರ್ಜಿ/ಶುಲ್ಕದ ವಿವರಗಳನ್ನು ಪರಿಶೀಲಿಸಿ ಯಾದಿಯನ್ನು **ದಿನಾಂಕ:15/10/2026** ರ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

## ವಿಶೇಷ ಸೂಚನೆಗಳು

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಮಾಹಾವಿದ್ಯಾಲಯಗಳು ಪ್ರತಿ ಶೈಕ್ಷಣಿಕ ವರ್ಷಕ್ಕೆ ಸಂಯೋಜನೆಯನ್ನು ಪಡೆಯುವದು ಕಡ್ಡಾಯವಾಗಿರುತ್ತದೆ. ಕೆಲವೊಂದು ಮಹಾವಿದ್ಯಾಲಯಗಳಿಂದ ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೇ ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ಹಾಗೂ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಿರುವುದನ್ನು ಗಮನಿಸಲಾಗಿದೆ ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೆ ಇದ್ದಲ್ಲಿ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಕ್ರಮಗಳನ್ನು ಮುಂದುವರೆಸುವದಕ್ಕೆ/ವಿಸ್ತರಿಸುವದಕ್ಕೆ ಮಾನ್ಯತೆ ಇರುವುದಿಲ್ಲ ಹಾಗೂ ಅಂತಹ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ತುಂಬಲು ಸಹ ಅರ್ಹರಿರುವುದಿಲ್ಲ. ಆದ್ದರಿಂದ ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವಾಗ ಸಿಡಿಸಿ/ಸಂಯೋಜನೆ ವಿಭಾಗದಿಂದ ಪಡೆದ ಪ್ರಸಕ್ತ ವರ್ಷದ ಅಧಿಸೂಚನೆಯನ್ನು ಕಡ್ಡಾಯವಾಗಿ ಲಗತ್ತಿಸುವದು.

ಪು.ತಿ.ನೋ

2. ಸರಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ-೨), ಕರ್ನಾಟಕ ಸರಕಾರದ ಸಚಿವಾಲಯ, ಬಹುಮಹಡಿ ಕಟ್ಟಡ ಇವರ ಪತ್ರ ನಂ.ಇಡಿ 13 ಯುಕೆಎಸ್ 2014 ದಿನಾಂಕ 16/01/2015 ರಲ್ಲಿ ಎಲ್ಲ ಪದವಿ ಕೋರ್ಸಗಳನ್ನು ಪೂರ್ಣಗೊಳಿಸುವ ಗರಿಷ್ಠ ಅವಧಿಯನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಸ್ತುತ ಜಾರಿಯಲ್ಲಿರುವ ನಿಯಮದಂತೆ (Resolution) "ಎಲ್ಲ ವಿದ್ಯಾರ್ಥಿಗಳು ಒಂದು ವರ್ಷದ ಅವಧಿಯ ಪದವಿಯನ್ನು ಮೂರು ವರ್ಷಗಳೊಳಗಾಗಿ ಮತ್ತು ಇತರೆ ಪದವಿಗಳ ವಿದ್ಯಾರ್ಥಿಗಳು ತಮ್ಮ ಪದವಿಯನ್ನು Double the Duration of the Course ನ ಒಳಗಾಗಿ ಪೂರ್ಣಗೊಳಿಸಲು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಕ್ರಮವಹಿಸುವಂತೆ ನಿರ್ದೇಶಿಸಿರುತ್ತಾರೆ." ಅದರಂತೆ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರು ಕ್ರಮ ಜರುಗಿಸುವಂಂತೆ ಮಾನ್ಯ ಕುಲಪತಿಗಳು ದಿನಾಂಕ: 16/02/2015 ರಲ್ಲಿ ಆದೇಶಿಸಿರುತ್ತಾರೆ.

3. ಕವಿವಿ ವ್ಯಾಪ್ತಿಯ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ/ ಸಂಯೋಜಕರಿಗೆ ತಿಳಿಸುವದೇನೆಂದರೆ, ನಿಯಮಾನುಸಾರ ಪದವಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಎಲ್ಲ 1 ವರ್ಷದ ಪದವಿಯನ್ನು 3 ವರ್ಷದೊಳಗಾಗಿ ಹಾಗೂ 3 ವರ್ಷದ ಪದವಿಯನ್ನು 6 ವರ್ಷದೊಳಗಾಗಿ ಪೂರ್ಣಗೊಳಿಸಲು ವಿದ್ಯಾರ್ಥಿಗಳಿಗೆ ತಿಳಿಸುವುದು. ಆದುದರಿಂದ ನಿಯಮಾನುಸಾರ ಪದವಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಗರಿಷ್ಟ ಅವಧಿಯನ್ನು ಮುಕ್ತಾಯಗೊಳಿಸಿರುವ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ/ಶುಲ್ಕ ತುಂಬಲು ಅರ್ಹರಾಗಿರುವುದಿಲ್ಲ.

## ಸೂಚನೆಗಳು

1. UUCMS ಅಂತರ್ಜಾಲದ ಮೂಲಕ ವಿದ್ಯಾರ್ಥಿಗಳು ಸಲ್ಲಿಸಿದ ಪರೀಕ್ಷಾ ಅರ್ಜಿಗಳನ್ನು ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಚಾರ್ಯರು ಈ ಮುಂದಿನ ಷರುತ್ತುಗಳಿಗೆ ಒಳಪಟ್ಟು ಸಹಿ ಮಾಡಬೇಕು. ಪ್ರತಿ ಸೆಮೆಸ್ಟರ ಪ್ರತಿ ವಿಷಯದಲ್ಲೂ ಕನಿಷ್ಠ 75% ಹಾಜರಾತಿಯನ್ನು ಪೂರೈಸದ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ ನಮೂನೆಗಳನ್ನು ರದ್ದುಪಡಿಸುವ ಷರುತ್ತುಗಳಿಗೆ ಒಳಪಟ್ಟಿರುತ್ತದೆ. ಮಹಾವಿದ್ಯಾಲಯಗಳ ಪ್ರಾಚಾರ್ಯರ ಕೋರಿಕೆಯ ಮೇರೆಗೆ ಅಂತಹ ವಿದ್ಯಾರ್ಥಿಗಳ ಪರೀಕ್ಷೆಯ ಪ್ರವೇಶ ಪತ್ರಗಳನ್ನು (ಹಾಲ್ ಟಿಕೆಟ) ಫ್ರೀಜ್/ ತಡೆಹಿಡಿಯಲಾಗುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ಅಂತರ್ಜಾಲದಲ್ಲಿ ಭರ್ತಿ ಮಾಡಿದ ಪರೀಕ್ಷಾ ಅರ್ಜಿಯ ಆಧಾರದ ಮೇಲೆ ಪರೀಕ್ಷೆ ಬರೆಯಲು ಅವಕಾಶ ನೀಡುವದಿಲ್ಲ. ಯು.ಜಿ.ಸಿ ನಿಯಮಗಳ ಪ್ರಕಾರ ವಿದ್ಯಾರ್ಥಿಗಳು ಕಡ್ಡಾಯವಾಗಿ 75% ರಷ್ಟು ಹಾಜರಾತಿಯನ್ನು ಪೂರೈಸಿರಬೇಕು.
2. ಪರೀಕ್ಷಾ ಶುಲ್ಕದ ಜೊತೆಗೆ ಪ್ರತಿ ವಿದ್ಯಾರ್ಥಿಯು **ರೂ.120/-** ನ್ನು ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಯ ಪ್ರಕ್ರೀಯೆ ಶುಲ್ಕವನ್ನು (ಪ್ರತಿ ಸೆಮೆಸ್ಟರಗೆ) ಹಾಗೂ **ರೂ.175/-** ನ್ನು ಅಂಕಪಟ್ಟಿ ಶುಲ್ಕವೆಂದು ಪಾವತಿಸುವದು.
3. **ಕರ್ನಾಟಕ ಸರ್ಕಾರವು SSP ಮೂಲಕ SC/ST/CAT-I/IIA/IIB/IIIA/IIIB ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಅರ್ಹ ವಿದ್ಯಾರ್ಥಿಗಳ ಖಾತೆ ನೇರವಾಗಿ ವರ್ಗಾಯಿಸುವುದರಿಂದ ಅಂತಹ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸುವುದು**.
4. ಸಂಬಂಧಪಟ್ಟ ಕೋರ್ಸುಗಳ ವಿದ್ಯಾರ್ಥಿಗಳು ಪ್ರೊಜೆಕ್ಟ / ಫೀಲ್ಡ ವರ್ಕ ರಿಪೋರ್ಟ ಮೌಲ್ಯಮಾಪನ/ವೈವಾ ಶುಲ್ಕ ರೂ.650/- ಗಳು ಕಾರಣಾಂತರಗಳಿಂದ UUCMS ತಂತ್ರಾಂಶದಲ್ಲಿ ಸೇರ್ಪಡೆಯಾಗಿರುವುದಿಲ್ಲ. ಕಾರಣ, ಮಹಾವಿದ್ಯಾಲಯದ ಪ್ರಾಚಾರ್ಯರು ಅಂತಹ ವಿದ್ಯಾರ್ಥಿಗಳಿಂದ ಎಲ್ಲ ಮೊತ್ತವನ್ನು ಕ್ರೋಢಿಕರಿಸಿ SBI Collect ನಲ್ಲಿ ಆನ್‌ಲೈನ್ ಮುಖಾಂತರ ವಿಶ್ವವಿದ್ಯಾಲಯಕ್ಕೆ ಭರಿಸಲು ಸೂಚಿಸಲಾಗಿದೆ.
5. ಮಹಾವಿದ್ಯಾಯದ ಪ್ರಾಚಾರ್ಯರು ಎಲ್ಲ ವಿದ್ಯಾರ್ಥಿಗಳ ಮಾಹಿತಿಯ ಯಾದಿಯೊಂದಿಗೆ ಪರೀಕ್ಷಾ ಅರ್ಜಿಗಳನ್ನು (ಹಾರ್ಡಕಾಫಿ) ಅವಶ್ಯ ದಾಖಲೆಗಳೊಂದಿಗೆ/ನಕಲು (ಝರಾಕ್ಸ) ಅಂಕಪಟ್ಟಿಗಳೊಂದಿಗೆ ನೇರವಾಗಿ ಸಂಬಂಧಪಟ್ಟ ಕಚೇರಿ ಅಧೀಕ್ಷಕರು, ಪರೀಕ್ಷಾ ವಿಭಾಗ, ವಿಶ್ವಚೇತನ ಬಿಲ್ಡಿಂಗ್, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ-580003 ಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಮಹಾವಿದ್ಯಾಲಯದವರು ಸಲ್ಲಿಸುವುದು.
6. UUCMS ಮೂಲಕ ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಗಳನ್ನು ತುಂಬಿಸುವಾಗ ತಿದ್ದುಪಡಿಯನ್ನು ತಪ್ಪಿಸಲು ಮಹಾವಿದ್ಯಾಲಯದ ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ನಿರ್ದೇಶನ ನೀಡುವುದು ಯಾವುದೇ ತಿದ್ದುಪಡಿಗಳು / ತಪ್ಪುಗಳು ಉಂಟಾದರೆ ಮಹಾವಿದ್ಯಾಲಯಗಳೆ ಜವಾಬ್ದಾರರಾಗಿರುತ್ತಾರೆ.
7. ಪರೀಕ್ಷೆಗೆ ಸಂಬಂದಿಸಿದಂತೆ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಭರಣ ಮಾಡಿದ ನಂತರ ಯಾವುದೇ ಕಾರಣಕ್ಕೂ ಮರಳಿ ಕೊಡುವದಿಲ್ಲ.
8. ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು ಸಂಬಂಧಿಸಿದ ಪ್ರಾಚಾರ್ಯರ ಸಹಿಯೊಂದಿಗೆ ಮಹಾವಿದ್ಯಾಲಯಕ್ಕೆ ಸಲ್ಲಿಸುವುದು. ಒಂದು ವೇಳೆ ಸ್ಥಗಿತಗೊಂಡ/ಮುಚಲ್ಪಟಂತಹ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಮಾತ್ರ ಪರೀಕ್ಷಾ ಶುಲ್ಕವನ್ನು SBI Online Portal ಮುಖಾಂತರ ಭರಿಸಿ ನೇರವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಶಾಖೆಯಲ್ಲಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವುದು.

ಪು.ತಿ.ನೋ

## ಪರೀಕ್ಷಾ ಶುಲ್ಕದ ವಿವಿರ

| ಅ.ನಂ | ವಿವರ | ಶುಲ್ಕ ರೂ. |
|---|---|---|
| 01 | ಅಂತರ್ಜಾಲದ ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | 120/- |
| 02 | ಅಂಕಪಟ್ಟಿ ಶುಲ್ಕ | 175/- |
| 03 | ಪರೀಕ್ಷಾಶುಲ್ಕ: ಪ್ರೋಜೆಕ್ಟ /ಫೀಲ್ಡ ವರ್ಕ ರಿಪೋರ್ಟ ಮೌಲ್ಯಮಾಪನ/ವೈವಾ ಶುಲ್ಕ (ಸಂಬಂಧಪಟ್ಟ ಕೋರ್ಸುಗಳಿಗೆ) | 650/- |
| 04 | ಪರೀಕ್ಷಾ ಶುಲ್ಕ: ಬಿ.ಎ./ ಬಿ.ಎಸ್‌ಸಿ. /ಬಿ.ಕಾಂ/ಬಿ.ಎ (ಐ.ಎಲ್.ಆರ್.ಡಿ) 3, & 5 ನೇ ಸೆಮೆಸ್ಟರ್ 1 ಪೇಪರ ₹ 290/–, 2 ಪೇಪರ ₹ 580/–, 3 ಪೇಪರ ₹ 870/–, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 950/– | 950/- |
| | ಪರೀಕ್ಷಾ ಶುಲ್ಕ: ಬಿ.ಎಸ್.ಡಬ್ಲೂ 3, & 5 ನೇ ಸೆಮೆಸ್ಟರ್. ( 1 ಪೇಪರ ₹ 310/–, 2 ಪೇಪರ ₹ 620/–, 3 ಪೇಪರ ₹ 930/–, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 1175/– | 1175/- |
| | ಪರೀಕ್ಷಾಶುಲ್ಕ:ಬಿಬಿಎ/ಬಿ.ಸಿ.ಎ/ಬಿ.ಕಾಂ.(ಸಿ.ಎಸ್)/ ಬಿ.ಎಸ್‌ಸಿ.(ಸಿ.ಎಸ್)/ ಬಿ.ಟಿ.ಟಿ.ಎಂ/ ಬಿ.ಎ.ಎಸ್.ಎಲ್.ಪಿ ಎಂಬೆಡೆಡ್/ಬಿ.ಕಾಂ.ಇ–ಕಾಮರ್ಸ ಆಪ್‌ರೇಷನ್/ಬಿಬಿಎ ಲಾಜಿಸ್ಟಿಕ್ಸ್ ಮ್ಯಾನೇಜಮೆಂಟ್/ ಬಿ.ಕಾಂ.ಬ್ಯಾಂಕಿಂಗ್ ಫೈನಾನ್ಸಿಯಲ್ ಸರ್ವಿಸಸ್ & ಇನಶ್ಯೂರನ್ (ಬಿ.ಎಫ್.ಎಸ್.ಐ) ಬಿ.ಕಾಂ.(ಲಾಜಿಸ್ಟಿಕ್ಸ್ ಎ.ಇ.ಡಿ.ಪಿ) ಬಿ.ಕಾಂ. ರಿಟೇಲ್ ಆಪ್‌ರೇಷನ್ (ಆರ್.ಇ.ಓ.ಎಂ) 3 & 5 ನೇ ಸೆಮೆಸ್ಟರ್ 1 ಪೇಪರ ₹ 360/–, 2 ಪೇಪರ ₹ 720/–, 3 ಪೇಪರ ₹ 1080/–, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 1260/– | 1260/- |
| | ಪರೀಕ್ಷಾ ಶುಲ್ಕ: ಬಿ.ಎಸ್‌ಸಿ (ಹೋಟೆಲ್ ಮ್ಯಾನೇಜಮೆಂಟ್)– 3 & 5 ನೇ ಸೆಮೆಸ್ಟರ್ ನೇ ಸೆಮೆಸ್ಟರ್ 1 ಪೇಪರ ₹ 415/–, 2 ಪೇಪರ ₹ 830/–, 3 ಪೇಪರ ₹ 1245/–, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹.1705/– | 1705/- |
| | ಪರೀಕ್ಷಾ ಶುಲ್ಕ: ಬಿ.ವಿ.ಎ– 3 & 5 ನೇ ಸೆಮೆಸ್ಟರ್ (1 ಪೇಪರ ₹ 400/–, 2 ಪೇಪರ ₹ 800/–, 3 ಪೇಪರ ₹ 1200/–, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹.1470/– | 1470/- |
| | ಪರೀಕ್ಷಾ ಶುಲ್ಕ: ಬಿ.ಪಿ.ಎ. 3 & 5 ನೇ ಸೆಮೆಸ್ಟರ್ (1 ಪೇಪರ ₹ 330/–, 2 ಪೇಪರ ₹ 660/–, 3 ಪೇಪರ ₹ 940/–, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 1035/– | 1035/- |
| | ಪರೀಕ್ಷಾ ಶುಲ್ಕ: ಬಿ.ಎ.ಎಸ್‌ಸಿ (ಪಲ್ಪ ಮತ್ತು ಪೇಪರ ಸಾಯನ್ಸ/ಎಂಬೆಡೆಡ್) 3 & 5 ನೇ ಸೆಮೆಸ್ಟರ್ 1 ಪೇಪರ ₹ 330/–, 2 ಪೇಪರ ₹ 660/–, 3 ಪೇಪರ ₹ 990/–, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮೆಸ್ಟರಗೆ ₹ 1035/– | 1035/- |

ಸದರಿ ಮೇಲಿನ ಅಧಿಸೂಚನೆಯನ್ನು ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಪರೀಕ್ಷಾ ಅರ್ಜಿ/ ಶುಲ್ಕಗಳನ್ನು ತುಂಬಿಸಿಕೊಳ್ಳುವುದು.

23/09/2026

ಕುಲಸಚಿವರು(ಮೌಲ್ಯಮಾಪನ)

ಗೆ,

ಕವಿವಿ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**<u>ಪ್ರತಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:</u>**

1) ಕವಿವಿ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.
2) ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3) ಅಭಿವೃದ್ಧಿ ಅಧಿಕಾರಿಗಳು, ಅಂಕಿ ಸಂಖ್ಯೆ ವಿಭಾಗ/ ಶಿಷ್ಯವೇತನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ,/ಎಸ್‌ಸಿ/ಎಸ್‌ಟಿ/ಕೆ–ಗ/ಓಬಿಸಿ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (ಅಧಿಸೂಚನೆಯನ್ನು ಅಂತರ್ಜಾಲದಲ್ಲಿ ಪ್ರಕಟಿಸುವುದು.)
6) ಆಪ್ತಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ)/ವಿತ್ತಾಧಿಕಾರಿಗಳು, ಕವಿವಿ, ಧಾರವಾಡ.
7) ಸಿಸ್ಟಮ್ ಎನಾಲಿಸ್ಟ, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ.
8) ಉಪಕುಲಸಚಿವರು/ ಸಹಾಯಕ ಕುಲಸಚಿವರು, ಪರೀಕ್ಷಾ/ ಹಣಕಾಸು/ ವಿದ್ಯಾಮಂಡಳ ವಿಭಾಗ, ಕ ವಿ ವಿ, ಧಾರವಾಡ.
9) ಅಧೀಕ್ಷಕರು, ಹಣಕಾಸು/ ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
10) ಅಧೀಕ್ಷಕರು,ಗೌಪ್ಯ/ಪ್ರಶ್ನೆಪತ್ರಿಕೆ/ಬಿ.ಎ./ಬಿ.ಕಾಂ./ಬಿ.ಎಸ್.ಸಿ./ಕಾನೂನು/ಘಟಿಕೋತ್ಸವ ಪರೀಕ್ಷಾ ವಿಭಾಗ, ಕವಿವಿ, ಧಾರವಾಡ.